ನಿ-72 ಕುಯ್ಯೋಟರ್
ಕ್ರ-99
145ನೇ ಆಧಿವೇಶನ

ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಯು.ಬಿ.ವೆಂಕಟೇಶ್ ಇವರು ರಾಜ್ಯದಲ್ಲಿ ಕೋವಿಡ್-19 ಪ್ರಕರಣ ಮತ್ತು ಅದರ ಸಂಬಂಧಿತ ಸಮಸ್ಯೆಗಳ ಹಿತದೃಷ್ಟಿಯಿಂದ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಿನ ಆಸ್ಪತ್ರೆಗಳು ಆರೈಕೆ ಕೇಂದ್ರಗಳನ್ನು ಆರಂಭಿಸುವ ಕುರಿತು ನಿಯಮ 72 ರಡಿಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಸಚಿವರ ಹೇಳಿಕೆ :

ರಾಜ್ಯದಲ್ಲಿ ಕೋವಿಡ್ -19 ಪ್ರಕರಣ ಮತ್ತು ಅದರ ಸಂಬಂಧಿತ ಸಮಸ್ಯೆಗಳ ಹಿತದೃಷ್ಟಿಯಿಂದ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಿನ ಆಸ್ಪತ್ರೆಗಳು/ ಆರೈಕೆ ಕೇಂದ್ರಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಡಿಯಲ್ಲಿ ಕೋವಿಡ್ 19 ಪರಿಸ್ಥಿತಿ ನಿಭಾಯಿಸಲು ಪ್ರಾರಂಭದಲ್ಲಿ ಆರೋಗ್ಯ ಸಂಸ್ಥೆಗಳಲ್ಲಿ ಸನ್ನದ್ಧತೆಗೆ ಚಿಕಿತ್ಸಾ ಸೌಲಭ್ಯಗಳನ್ನು ಈ ಕೆಳಕಂಡಂತೆ ನೀಡಲು ಕ್ರಮವಹಿಸಲಾಗಿತ್ತು. ತದನಂತರ ಹಂತ ಹಂತವಾಗಿ ಮೂಲಸೌಕರ್ಯ ಸೌಲಭ್ಯಗಳನ್ನು ಹೆಚ್ಚಿಸಿಕೊಳ್ಳಲಾಗಿದೆ.

| ಕೋವಿಡ್-19 ಪ್ರಾರಂಭದಲ್ಲಿ ಕ್ರಮವಹಿಸಿದ ವಿವರ | | ಕೋವಿಡ್ –19 ಪರಿಸ್ಥಿತಿ ನಿಭಾಯಿಸಲು ಪ್ರಸ್ತುತ ವಿವರ |
|---|---|---|
| ಆಕ್ಸಿಜನ್‌ವುಳ್ಳ ಹಾಸಿಗೆಗಳು | 587 | 22606 |
| ವೆಂಟಿಲೇಟರ್ ಸಹಿತ | 312 | 3004 |
| ಐಸಿಯು ಹಾಸಿಗೆ | 896 | 2682 |
| ವೆಂಟಿಲೇಟರ್ ರಹಿತ ಹಾಸಿಗೆಗಳ ಲಭ್ಯತೆ | 584 | - |
| ಸಾಮಾನ್ಯ ಹಾಸಿಗೆಗಳು | - | 17307 |
| ಒಟ್ಟು | 2379 | 45599 |

ಮುಂದುವರೆದು, ಖಾಸಗಿ ಆಸ್ಪತ್ರೆಗಳಲ್ಲಿ ಒಟ್ಟು 107896 ಹಾಸಿಗೆಗಳು, 13238-ಆಕ್ಸಿಜನ್ ಹಾಸಿಗೆಗಳು, 5069-ಐಸಿಯು ಹಾಸಿಗೆಗಳು, 1788-ವೆಂಟಿಲೇಟರ್ ಸಹಿತ ಐಸಿಯು ಹಾಸಿಗೆಗಳು ಲಭ್ಯವಿರುತ್ತವೆ.

ವೈದ್ಯಕೀಯ ಶಿಕ್ಷಣ ಇಲಾಖೆಯು ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ.

| ಕೋವಿಡ್-19 ಪ್ರಾರಂಭದಲ್ಲಿ ಕ್ರಮವಹಿಸಿದ ವಿವರ | | ಕೋವಿಡ್ –19 ಪರಿಸ್ಥಿತಿ ನಿಭಾಯಿಸಲು ಪ್ರಸ್ತುತ ವಿವರ |
|---|---|---|
| ಆಕ್ಸಿಜನ್‌ವುಳ್ಳ ಹಾಸಿಗೆಗಳು | 4260 | 11346 |
| ವೆಂಟಿಲೇಟರ್ ಸಹಿತ | 440 | 1560 |
| ಐಸಿಯು ಹಾಸಿಗೆ | 1302 | 2112 |
| ವೆಂಟಿಲೇಟರ್ ರಹಿತ ಹಾಸಿಗೆಗಳ ಲಭ್ಯತೆ | 862 | 775 |
| ಒಟ್ಟು | 6864 | 15793 |

ಮುಂದುವರೆದು, ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ 14817 ಆಕ್ಸಿಜನ್ ಹಾಸಿಗೆಗಳು, 2508-ಐಸಿಯು ಹಾಸಿಗೆಗಳು, 913-ವೆಂಟಿಲೇಟರ್ ಸಹಿತ ಐಸಿಯು ಹಾಸಿಗೆಗಳು, ಒಟ್ಟು 35515 ಹಾಸಿಗೆಗಳು ಲಭ್ಯವಿರುತ್ತವೆ.

ಪಿ.ಎಂ. ಕೇರ್ಸ್ ಅಡಿಯಲ್ಲಿ ಒಟ್ಟು 2871 ವೆಂಟಿಲೇಟರ್‌ಗಳನ್ನು ಸ್ವೀಕರಿಸಲಾಗಿದ್ದು, ಜಿಲ್ಲಾ ಆಸ್ಪತ್ರೆಗಳಿಗೆ ಮತ್ತು ತಾಲ್ಲೂಕು ಆಸ್ಪತ್ರೆಗಳಿಗೆ ಒಟ್ಟು 2005 ವೆಂಟಿಲೇಟರ್‌ಗಳನ್ನು ವಿತರಿಸಲಾಗಿದೆ. ಇದಲ್ಲದೆ, ವೈದ್ಯಕೀಯ ಶಿಕ್ಷಣ ಇಲಾಖೆ ಹಾಗೂ ಖಾಸಗಿ ಆಸ್ಪತ್ರೆಗಳಿಗೆ 862 ವೆಂಟಿಲೇಟರ್‌ಗಳನ್ನು ವಿತರಿಸಲಾಗಿದೆ. ಈ ಸಂದರ್ಭದಲ್ಲಿ ಸರ್ಕಾರಿ ಆಸ್ಪತ್ರೆಗಳ ಜೊತೆಗೆ ತುರ್ತು ಪರಿಸ್ಥಿತಿಯನ್ನು ನಿಭಾಯಿಸಲು, ಖಾಸಗಿ ಆಸ್ಪತ್ರೆಗಳಿಗೂ ಕೂಡ ತಾತ್ಕಾಲಿಕವಾಗಿ ಷರತ್ತುಗಳಿಗೆ ಒಳಪಟ್ಟು ವೆಂಟಿಲೇಟರ್‌ಗಳನ್ನು ಒದಗಿಸಲಾಗಿದೆ.

ಪ್ರಸ್ತುತ, ರಾಜ್ಯದ ಎಲ್ಲಾ ಖಾಸಗಿ ಆಸ್ಪತ್ರೆಗಳಲ್ಲಿ ಶೇಕಡಾ 25 ರಷ್ಟು ಹಾಸಿಗೆಗಳನ್ನು ಸರ್ಕಾರಿ ಆಸ್ಪತ್ರೆಗಳಿಂದ ರೆಫರ್ ಮಾಡಲಾಗುವ ಕೋವಿಡ್-19 ಪ್ರಕರಣಗಳಿಗೆ ಮೀಸಲಿಡಲಾಗಿದೆ.

ಆರೈಕೆ ಕೇಂದ್ರಗಳು:

ಕೋವಿಡ್-19 ಸೋಂಕಿನ ಲಕ್ಷಣ ರಹಿತರು ಅಥವಾ ಸಾಧಾರಣ ಲಕ್ಷಣಗಳನ್ನು ಹೊಂದಿರುವವರಿಗೆ, ಚಿಕಿತ್ಸೆ ಹಾಗೂ ನಿರ್ವಹಣೆಗೆ ಕೋವಿಡ್ ಕೇರ್ ಸೆಂಟರ್/ ಆರೈಕೆ ಕೇಂದ್ರ (CCC) ಗಳಿಗಾಗಿ ಈ ಕೆಳಕಂಡ ವ್ಯವಸ್ಥೆಯನ್ನು ಮಾಡಲಾಗಿದೆ.

1. ಅವಶ್ಯಕ ಸೌಕರ್ಯಗಳಿರುವ ಗುರುತಿಸಲ್ಪಟ್ಟ ಹಾಗೂ ಸರ್ಕಾರಿ ಆರೋಗ್ಯ ಸಂಸ್ಥೆಗಳಿಗೆ ಹೊಂದಿಕೊಂಡಿರುವ ಕಟ್ಟಡಗಳು ಸರ್ಕಾರಿ ಕೋವಿಡ್ ಕೇರ್ ಸೆಂಟರ್‌ಗಳಾಗಿ ಕಾರ್ಯನಿರ್ವಹಿಸುತ್ತಿವೆ. ಸದರಿ ಕೇಂದ್ರಗಳಲ್ಲಿ ಕೋವಿಡ್ ದೃಢಪಟ್ಟಿರುವ, ಆದರೆ ಸೋಂಕಿನ ಲಕ್ಷಣ ರಹಿತರು ಅಥವಾ ಸಾಧಾರಣ ಲಕ್ಷಣಗಳನ್ನು ಹೊಂದಿರುವ, ಅಂತರರಾಷ್ಟ್ರೀಯ ಪ್ರಯಾಣಿಕರಿಗೆ ಚಿಕಿತ್ಸೆ ಹಾಗೂ ನಿರ್ವಹಣೆಯು ಉಚಿತವಾಗಿರುತ್ತದೆ.

2. ಖಾಸಗಿ ಆರೋಗ್ಯ ಸಂಸ್ಥೆಗಳಿಗೆ ಹೊಂದಿಕೊಂಡಿರುವ, ಗುರುತಿಸಲ್ಪಟ್ಟ ಖಾಸಗಿ ಬಜೆಟ್ ಹೋಟೆಲ್ ಗಳು, 3 ಸ್ಟಾರ್ ಮತ್ತು 5 ಸ್ಟಾರ್ ಹೋಟೆಲ್‌ಗಳು, ಖಾಸಗಿ ಕೋವಿಡ್ ಕೇರ್ ಸೆಂಟರ್ ಗಳಾಗಿ ಕಾರ್ಯನಿರ್ವಹಿಸಲಿದ್ದು, ಕೋವಿಡ್ ದೃಢಪಟ್ಟ ಅಂತರಾಷ್ಟ್ರೀಯ ಪ್ರಯಾಣಿಕರು ಇವುಗಳಲ್ಲಿ ಚಿಕಿತ್ಸೆ ಹಾಗೂ ನಿರ್ವಹಣೆಗೆ ಒಳಪಟ್ಟಲ್ಲಿ, ಅನ್ವಯಿಕ ವೆಚ್ಚಗಳನ್ನು ತಮ್ಮ ಸ್ವಂತ ಖರ್ಚಿನಲ್ಲಿಯೇ ಭರಿಸಬೇಕು.

3. ಸರ್ಕಾರಿ ಅಥವಾ ಖಾಸಗಿ ಕೋವಿಡ್ ಕೇರ್ ಸೆಂಟರ್‌ನಲ್ಲಿರುವ ಅವಧಿಯಲ್ಲಿ, ಸೋಂಕಿನ ಲಕ್ಷಣಗಳು ಕಂಡು ಬಂದಲ್ಲಿ, ಅಂತಹವರನ್ನು ಶೀಘ್ರವೇ ಅಗತ್ಯ ಚಿಕಿತ್ಸೆ ಹಾಗೂ ನಿರ್ವಹಣೆಗಾಗಿ ಸೂಕ್ತ ಆರೋಗ್ಯ ಸಂಸ್ಥೆಗೆ ದಾಖಲಿಸುವುದು ಕಡ್ಡಾಯವಾಗಿರುತ್ತದೆ.

4. ಸರ್ಕಾರಿ/ಖಾಸಗಿ ಕೋವಿಡ್ ಕೇರ್ ಸೆಂಟರ್‌ಗಳಲ್ಲಿ ಐಸೋಲೇಷನ್ ಅವಧಿಯು 7 ದಿನಗಳಾಗಿರುತ್ತವೆ. ಒಟ್ಟು 7 ದಿನಗಳ ಅವಧಿಯಲ್ಲಿ, ಹಿಂದಿನ 3 ದಿನಗಳಲ್ಲಿ, ಜ್ವರ , ಉಸಿರಾಟದ ಸಮಸ್ಯೆ ಹಾಗೂ SpO2 ಪ್ರಮಾಣವು 94 % ಅಥವಾ ಅದಕ್ಕಿಂತ ಹೆಚ್ಚಿದ್ದಲ್ಲಿ, ಅಂತಹವರನ್ನು ಕೋವಿಡ್ ಕೇರ್ ಸೆಂಟರ್ ನಿಂದ ಡಿಸ್ಚಾರ್ಜ್, ಮಾಡಬಹುದಾಗಿರುತ್ತದೆ.

5. ಸೋಂಕಿನ ಲಕ್ಷಣ ರಹಿತರಿಗೆ, ಕೋವಿಡ್ ಕೇರ್ ಸೆಂಟರ್‌ನಲ್ಲಿ 2 ದಿನಗಳ ಸಾಂಸ್ಥಿಕ ಪ್ರತ್ಯೇಕತೆಯ ಅವಧಿಯನ್ನು ಆರ್‌ಟಿಪಿಸಿಆರ್ ಪರೀಕ್ಷೆ ನಡೆಸಿದ ದಿನದಿಂದ ಪರಿಗಣಿಸಬೇಕು. (Covid Appropriate Behaviour- CAB )

6. ಸಾಂಸ್ಥಿಕ ಪ್ರತ್ಯೇಕತೆಯ 7 ದಿನಗಳ ನಂತರ, ಕೋವಿಡ್ ಸೂಕ್ತ ನಡವಳಿಕೆಗಳೊಂದಿಗೆ (Covid Appropriate Behaviour- CAB) 7 ದಿನಗಳ ಹೋಂ ಕ್ವಾರಂಟೈನ್ ಪಾಲಿಸುವುದು ಕಡ್ಡಾಯವಾಗಿರುತ್ತದೆ. 7 ದಿನಗಳ ಹೋಂ ಕ್ವಾರಂಟೈನ್ ನಂತರ ಅಂತಹವರನ್ನು ಬಿಡುಗಡೆಗೊಳಿಸಬಹುದಾಗಿರುತ್ತದೆ.

ಒಟ್ಟಾರೆಯಾಗಿ, ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಕೋವಿಡ್-19 ಮತ್ತು ಅದರ ಸಂಬಂಧಿತ ಸಮಸ್ಯೆಗಳ ಚಿಕಿತ್ಸೆ ಹಾಗೂ ನಿರ್ವಹಣೆಗಾಗಿ ಆಸ್ಪತ್ರೆಗಳಲ್ಲಿ ಸೂಕ್ತ ಸೌಲಭ್ಯಗಳು ಹಾಗೂ ವ್ಯವಸ್ಥೆಯನ್ನು ಮತ್ತು ನಿರ್ವಹಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಆಕುಕ 33 ಎಸ್‌ಎಂಎಂ 2022

(ಡಾ|| ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು